ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಇವರಿಗೆ ಚುನಾವಣೆ ಬಗ್ಗೆ ಕಳಕಳಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ ಇದು ಸರ್ಕಾರ ನೀತಿ ಸರಿಯಲ್ಲ. ಆದ್ದರಿಂದ ನಾನು ಸಭಾತ್ಯಾಗ ಮಾಡಿ ಹೊರಗೆ ಹೋಗುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಧ್ಯಕ್ಷರೆ, ಇದು ರೈತ ವಿರೋಧಿ ಸರ್ಕಾರ, ರೈತರ ಶೋಷಣೆ ಮಾಡತಕ್ಕಂಥ ಸರ್ಕಾರ, ಇವರಿಗೆ ಚುನಾವಣೆ ಮಾಡಲಿಕ್ಕೆ ಧೈರ್ಯ ಇಲ್ಲ. ಅದಕ್ಕಾಗಿ ಮುಂದೆ ಹಾಕುತ್ತಿದ್ದಾರೆ.

(ಈ ಹಂತದಲ್ಲಿ ಜನತಾದಳದ ಸದಸ್ಯರು, ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದು ರೈತ ವಿರೋಧಿ ಸರ್ಕಾರ, ರೈತರನ್ನು ಶೋಷಣೆ ಮಾಡುವ ಸರ್ಕಾರ ಇವರು ಚುನಾವಣೆಯನ್ನು ಮಾಡುವುದಕ್ಕೆ ತಯಾರಿಲ್ಲವಾದ್ದರಿಂದ ಸಭಾತ್ಯಾಗ ಮಾಡುತ್ತೇವೆ. (ಈ ಹಂತದಲ್ಲಿ ವಿರೋಧಪಕ್ಷದ ಎಲ್ಲ ಮಾನ್ಯ ಸದಸ್ಯರೂ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 150 ದಿನದೊಳಗೇ ಚುನಾವಣೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರೂ ಇವರು ಸಭಾತ್ಯಾಗ ಮಾಡುವುದಾದರೆ ಏನು ಅರ್ಥವಿದೆ?

ಡಂಕೆಲ್ ಪ್ರಸ್ತಾವನೆ

105 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಂಕೆಲ್ ಪ್ರಸ್ತಾವನೆ ಬಗ್ಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಅಭಿಪ್ರಾಯ ಕೇಳಿ ಪ್ರಸ್ತಾವವೇ ಏನಾದರೂ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದರ ಸಾರಾಂಶವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೆ, ತಮಗೆ ಬಂದಿರುವ ಪತ್ರದಲ್ಲಿರುವ ಸಾರಾಂಶ ಏನೆಂಬುದನ್ನು ಹೇಳುತ್ತೀರಾ? ಡಂಕಲ್ ಪ್ರಸ್ತಾವನೆಯ ವಿಷಯದಲ್ಲಿ ದೆಹಲಿಯಿಂದ ತಮಗೆ ಏನು ಪತ್ರ ಬಂದಿದೆ ಅದರಲ್ಲಿ ಏನು ಬರೆದಿದ್ದಾರೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರು ಹೇಳತಕ್ಕ ರೀತಿಯಲ್ಲಿ ಮೂಲತಃ ನಮಗೆ ಕೇಂದ್ರ ಸರ್ಕಾರದಿಂದ ಇದೇ ರೀತಿ ಮಾಡಬೇಕೆಂಬ ನಿರ್ದೇಶನವಾಗಲಿ, ಅಥವಾ ಈಗಿರತಕ್ಕ ನೀತಿಯನ್ನು ಬದಲಾವಣೆ ಮಾಡತಕ್ಕ ವಿಷಯದಲ್ಲಾಗಲಿ ನಮಗೇನೂ ಪತ್ರ ಬಂದಿಲ್ಲ.

ಪ್ರೊ ಎಂ.ಡಿ. ನಂಜುಡಸ್ವಾಮಿ : ಮಾನ್ಯ ವೆಂಕಟಪ್ಪನವರು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ.

ಅಧ್ಯಕ್ಷರು : ಅವರು ಸಮಾಧಾನ ಪಟ್ಟುಕೊಂಡಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅವರಿಗೆ ಸಮಾಧಾನವಾಗಿರಬಹುದು, ಆದರೆ ನನಗೆ ಸಮಾಧಾನ ಆಗಿಲ್ಲ. He might be satisfied but I am not satisfied.

ಅಧ್ಯಕ್ಷರು : ಇದೇ ವಿಷಯವನ್ನು ಬೇರೆ ಪ್ರಶ್ನೆಯಾಗಿ ಬೇರೆ ರೂಪದಲ್ಲಿ ಕೇಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಇದರಲ್ಲಿ ಭಾಗವಹಿಸುವುದಕ್ಕೆ ಅವಕಾಶವಿದೆಯಲ್ಲಾ. ಈ ವಿಚಾರವನ್ನು ಸರ್ಕಾರ ಬಹಳ ಲಘುವಾಗಿ ತೆಗೆದುಕೊಂಡಿದೆ. ಸರ್ಕಾರ ಉತ್ತರ ಕೊಟ್ಟಿರುವ ರೀತಿಯನ್ನು ನೋಡಿದರೆ ಇದು ಸರ್ಕಾರವೋ ಅಥವಾ ಮುನಿಸಿಪಾಲಿಟಿಯೋ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು : ಇದೇ ವಿಚಾರವನ್ನೇ ತಾವು ಬೇರೆ ರೂಪದಲ್ಲಿ ಕೇಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ದಯವಿಟ್ಟು ಕೇಳಬೇಕು. ನಾನು ಒಂದೇ ಒಂದು ಪಟ್ಟಿಯನ್ನು ಓದುತ್ತೇನೆ. ಇದರಿಂದ ಈ ರಾಷ್ಟ್ರದ ಎಷ್ಟು ಅಧಿಕಾರಗಳು ಮೊಟಕಾಗುತ್ತವೆ ಎಂಬ ಬಗ್ಗೆ ತಮಗೆ ಯಾವುದೇ ಪ್ರಜ್ಞೆ ಇಲ್ಲದೆ ಕೆಲಸಮಾಡುತ್ತಿದ್ದೀರಲ್ಲಾ. ನೀವು ರಾಜ್ಯಸರ್ಕಾರವೋ ಅಥವಾ ಮುನಿಸಿಪಾಲಿಟಿಯೋ? ಡಂಕಲ್ ಪ್ರೊಪೋಸಲ್‌ಬಗ್ಗೆ ಇವರು ಕೇಳುತ್ತಿದ್ದಾರೆ. ಆದರೆ ಪ್ರೊಪೋಸಲ್ ಆಗಿ ಅದು ಅಲ್ಲಿ ಉಳಿದಿಲ್ಲ. It has become a GATT Treaty now and you are putting your signature- your Government in Delhi.

ನಿಮ್ಮ ಅಧಿಕಾರಗಳು ಎಷ್ಟು ಹೋಗುತ್ತವೆ ಎಂಬ ಬಗ್ಗೆ ಈ ಪಟ್ಟಿಯನ್ನು ಓದಿ ನಿಮಗೆ ಹೇಳಲೇ? ನಿಮ್ಮ ರಾಜ್ಯದ ಅಧಿಕಾರಗಳು ಎಷ್ಟಿವೆ ಅವೆಲ್ಲವೂ ಮೊಟಕಾಗುತ್ತವೆ. ದಯವಿಟ್ಟು ಕೇಳಬೇಕು.

ಅಧ್ಯಕ್ಷರು : ತಾವು ಇದನ್ನು ಬೇರೆ ರೂಪದಲ್ಲಿ ಕೇಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಇದು ಸಾಮಾನ್ಯ ವಿಷಯವಲ್ಲ. You should allow me to get at least the list of powers this Government is losing.

ಅಧ್ಯಕ್ಷರು : ಆದ್ದರಿಂದಲೇ ನಾನು ಹೇಳುತ್ತಿದ್ದೇನೆ. ತಾವು ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ನಾನು ಅದಕ್ಕೆ ಅವಕಾಶ ಕೊಡುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಈ ವಿಚಾರದಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇವೆಂದು 5-6 ದಿನದಿಂದ ಪಟ್ಟಿ ಮಾಡುತ್ತಾ ಬಂದಿರಿ. ಆ ಪಟ್ಟಿಯೂ ಬರುತ್ತಿಲ್ಲ, ಚರ್ಚೆ ಕೂಡ ಪ್ರಾರಂಭ ಆಗಲಿಲ್ಲ. ನಾವು ಹುಡುಗಾಟವನ್ನು ಮಾಡುತ್ತಿದ್ದೇವೆ. ಇದೇನಾದರೂ ಜಾರಿಗೆ ಬಂದರೆ ನಮ್ಮದು ರಾಜ್ಯ ಸರ್ಕಾರವಾಗಿ ಉಳಿಯುವುದಿಲ್ಲ, ಈಗಲೇ ಮುನಿಸಿಪಾಲಿಟಿ ಆಗಿದ್ದೇವೆ, ಆಮೇಲೆ ಇನ್ನೂ ಮುನಿಸಿಪಾಲಿಟಿ ಆಗುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮೊದಲನೇ ದಿವಸ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಪ್ರಸ್ತಾಪಮಾಡಿದಾಗ, ಈ ಅಧಿವೇಶನದಲ್ಲಿ ಪೂರ್ಣವಾಗಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಒಂದು ದಿವಸ ಪೂರ್ತಿ ಅವಕಾಶ ಮಾಡಿಕೊಡುತ್ತೇನೆಂದು ತಾವು ಹೇಳಿದ್ದಿರಿ. ಆದರೆ ಡಂಕಲ್ ಪ್ರಸ್ತಾವದ ಬಗ್ಗೆ ಇಲ್ಲಿ ಚರ್ಚೆಯೇ ಆಗಲಿಲ್ಲ.

ಅಧ್ಯಕ್ಷರು : ಕಾರ್ಯಕ್ರಮ ಪಟ್ಟಿಯಲ್ಲಿ ಈ ವಿಷಯ ಬಂದಿತ್ತು. ದಯವಿಟ್ಟು ನೋಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಬರುತ್ತದೆ, ಹೋಗುತ್ತದೆ. ಇಡೀ ರಾಜ್ಯದಲ್ಲಿ ಇಡೀ ದೇಶದಲ್ಲಿ ಗುಲಾಮಗಿರಿ ಬರುತ್ತದೆ. ಈ ವಿಚಾರದಲ್ಲಿ ಪ್ರಸ್ತಾಪವೇ ಇಲ್ಲ.